ಗುಣಮಟ್ಟ ಹಾಳಾಗಿದೆ. ಕುಡಿಯುವ ನೀರು ವಿಷಕಾರಿಯಾಗಿದೆ! ಕೆಲವು ದಿನಗಳ ಹಿಂದಷ್ಟೇ ಬೆಳ್ಳಂದೂರು ಕೆರೆಯಲ್ಲಿ 3 ಗಂಟೆಗಳ ಕಾಲ ಬೆಂಕಿ ಕಾಣಿಸಿಕೊಂಡಿತು. ಅದೇ ಕಾರಣಕ್ಕೆ ಕಾಣಿಸಿಕೊಳ್ಳುವ ಈ ಬೆಂಕಿಯ ಪ್ರಕರಣ ಮೊದಲನೆಯದ್ದಲ್ಲ, ಮೂರನೇ ಬಾರಿ ಕೆರೆ ಹೊತ್ತಿ ಉರಿದರೂ ಸಂಬಂಧಪಟ್ಟ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳುತ್ತಿಲ್ಲ. ಆಗಸ್ಟ್ 2016ರಲ್ಲೂ ಬೆಳ್ಳಂದೂರು ಕೆರೆಯಲ್ಲಿ ನೊರೆ ಕಾಣಿಸಿಕೊಂಡು, ಅವು ಒಡೆದು ಬೆಂಕಿ ಹುಟ್ಟಿಸಿದವು! ಕೆರೆಯಲ್ಲಿ ಕಸ ವಿಲೇವಾರಿ ಮಾಡುವುದು, ತ್ಯಾಜ್ಯವನ್ನು ಸುಡುವುದು ಮತ್ತು ಇತರ ಅಕ್ರಮಗಳಿಗೆ ಕಡಿವಾಣ ಹಾಕದೆ ಇರುವುದು ಇಂತಹ ಸಮಸ್ಯೆಗಳಿಗೆ ಕಾರಣ. ಸೊಳ್ಳೆಗಳಿಗೆ ಆಶ್ರಯತಾಣವಾಗಿ ಪರಿವರ್ತನೆಗೊಂಡಿದೆ. ಅಲ್ಲದೆ ದುರ್ವಾಸನೆ ಬೀರಿ ಸುತ್ತಮುತ್ತಲಿನ ನಿವಾಸಿಗಳಿಗೆ ಬಹಳ ತೊಂದರೆ ಉಂಟುಮಾಡಿದೆ.

ಜಲಜೀವಕ್ಕೆ ಹಾನಿಯಾಗದಂತೆ ನೋಡಿಕೊಳ್ಳುತ್ತ ಯಂತ್ರಗಳ ಸಹಾಯದಿಂದ ನೀರು ತೆಗೆದು ಜಲಾಶಯಗಳನ್ನು ತುಂಬುವ ಬಗ್ಗೆಯೂ ಮಾತುಕತೆ ನಡೆಯುತ್ತಿದೆ. ಕಾವೇರಿ ನೀರು ಅವಲಂಬಿತರು ಕಷ್ಟಪಡಲು ಇನ್ನೂ ಕೆಲವು ಕಾರಣಗಳಿವೆ. ಕಡಿಮೆ ಒತ್ತಡ, ಕಡಿಮೆಯಾದ ನೀರಿನ ಪೂರೈಕೆ ಮತ್ತು ಮಾಲಿನ್ಯ ಮುಖ್ಯವಾದ ಕಾರಣಗಳು. ಬೆಳಗ್ಗೆ 5:30 ಯಿಂದ 8:30 ವರೆಗೆ ಸರಬರಾಜಾಗುತ್ತಿದ್ದ ನೀರು ಇದೀಗ ಬರೀ 2 ಗಂಟೆಗಳ ಕಾಲ ಬರುತ್ತಿದೆ. ಅದೂ ಕಡಿಮೆ ಒತ್ತಡದೊಂದಿಗೆ. ಸಾಲದ್ದಕ್ಕೆ, ಈ ನೀರನ್ನು ಕುಡಿಯಲು ಬಳಸಲು ಸಾಧ್ಯವಿಲ್ಲ. ನೀರಲ್ಲಿ ಮೇಲಿನ ವಸ್ತುಗಳ ಪ್ರಮಾಣ ಅಷ್ಟು ಹೆಚ್ಚಾಗಿದೆ!

## ಪಟ್ಟಣಗಳಲ್ಲೇ ಸ್ಥಿತಿ ಈ ರೀತಿ ಇದ್ದರೆ, ಇನ್ನು (slums) ಕೊಳೆಗೇರಿಗಳಲ್ಲಿ ಹೇಗಿರಬೇಡ?

ಗಾರೆ ಕೆಲಸ ಮಾಡಲು ವಿಜಯಪುರದಿಂದ ಬಂದ ಕಾರ್ಮಿಕರು ನಲ್ಲಿ ನೀರಿಗಾಗಿ ಪರದಾಡುವ ಸ್ಥಿತಿ ಎದುರಾಗಿದೆ. ಜಲ ಮಂಡಳಿ ಕಳುಹಿಸುವ ನೀರಿನ ಟ್ಯಾಂಕರ್‌ಗಳು ಸಮಯಕ್ಕೆ ಸರಿಯಾಗಿ ಬರುವುದಿಲ್ಲ, ನೀರನ್ನೇ ಕಾದು ಕುಳಿತರೆ ಕೆಲಸ ಕೈ ತಪ್ಪಿ ಹೋಗುವ ಸಾಧ್ಯತೆ ಇದೆ. ಕೆಲಸ ನಂಬಿ ಬಂದವರು ನೀರಿಗಾಗಿ ಕಾಯಲು ಸಾಧ್ಯವಿಲ್ಲ, ಹಾಗಾಗಿ ಇವರಿಗೆಲ್ಲ ನೀರು ಸಿಕ್ಕರೆ ಸಿಕ್ಕಿತು, ಇಲ್ಲದಿದ್ದರೆ ಇಲ್ಲ!

ಕೆಟ್ಟುಹೋದ ಬೋರ್ವೆಲ್‌ಗಳು, ಏರುತ್ತಿರುವ ಕಾವು, ದಿನೇ ದಿನೇ ಹೆಚ್ಚುತ್ತಿರುವ ನೀರಿನ ಬೇಡಿಕೆ, ಇವೆಲ್ಲವೂ ಬರ ಸಮಸ್ಯೆಯನ್ನು ಇನ್ನೂ ಹದಗೆಡಿಸುತ್ತಿದೆ. ದಿನಕ್ಕೆ 1,300 ರಿಂದ 1,350 ಮಿಲಿಯನ್ ಲೀಟರ್ ಕುಡಿಯುವ ನೀರನ್ನು ಪಂಪ್ ಮಾಡುತ್ತಿದ್ದು, ಇಷ್ಟು ಬೆಂಗಳೂರಿನ ಜನತೆಗೆ ಸಾಕು ಎನ್ನುತ್ತಿದ್ದಾರೆ ಅಧಿಕಾರಿಗಳು. ಕುಡಿಯುವ ನೀರು ಸಾಕಾಗಬಹುದು. ಆದರೆ ಕುಡಿಯುವುದು ಬಿಟ್ಟು ಬೇರೆ ಕೆಲಸ ಕಾರ್ಯಗಳಿಗೆ ನೀರು ಎಲ್ಲಿ?

ಮುಂಬರುವ ಚುನಾವಣೆಯ ದೃಷ್ಟಿಯಲ್ಲಿ ಸ್ಲಂ ಪ್ರದೇಶಗಳಲ್ಲಿ ನೀರಿನ ಸಮಸ್ಯೆ ತಡೆಗಟ್ಟಲು ಹರಸಾಹಸ ನಡೆಯುತ್ತಿರುವುದೇನೋ ನಿಜ. ಆದರೆ ನೀರು ಪೋಲಾಗುವ ಸಮಸ್ಯೆ, ಸೋರಿಕೆ, ಕೆಟ್ಟು ಹೋದ ಹಳೇ ಪೈಪ್‌ಲೈನ್‌ಗಳು ಮತ್ತು ಅಕ್ರಮವಾಗಿ ಮೇನ್ ಪೈಪ್ ಲೈನ್‌ಗಳಿಂದ ನೀರು ಕದಿಯುವ ಸಮಸ್ಯೆಗೆ ಕಡಿವಾಣವಾಗಲಿ, ಪರಿಹಾರವಾಗಲಿ ಇನ್ನೂ ಕಂಡಿಲ್ಲ.



ಗಾರೆ ಕೆಲಸ ಮಾಡಲು ವಿಜಯಪುರದಿಂದ ಬಂಡ ಕಾರ್ಮಿಕರು ನಲ್ಲಿ ನೀರಿಗಾಗಿ ಪರದಾಡುವ ಸ್ಥಿತಿ ಎದುರಾಗಿದೆ. ಜಲ ಮಂಡಳಿ ಕಳುಹಿಸುವ ನೀರಿನ ಟ್ಯಾಂಕರ್‌ಗಳು ಸಮಯಕ್ಕೆ ಸರಿಯಾಗಿ ಬರುವುದಿಲ್ಲ, ನೀರನ್ನೇ ಕಾಡು ಕುಳಿತರೆ ಕೆಲಸ ಕೈ ತಪ್ಪಿಹೋಗುವ ಸಾಧ್ಯತೆ ಇದೆ. ಕೆಲಸ ನಂಬಿ ಬಂದವರು ನೀರಿಗಾಗಿ ಕಾಯಲು ಸಾಧ್ಯವಿಲ್ಲ, ಹಾಗಾಗಿ ಇವರಿಗೆಲ್ಲ ನೀರು ಸಿಕ್ಕರೆ ಸಿಕ್ಕಿತು, ಇಲ್ಲದಿದ್ದರೆ ಇಲ್ಲ!

ಆಶಾಕಿರಣ ಎಂದರೆ, ಕೊಡಗು ಜಿಲ್ಲೆಗೆ ಆಗೋ ಈಗೋ ಮಳೆ ಬರುತ್ತಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಕೊಡಗಿನಲ್ಲಿ ದುಪ್ಪಟ್ಟು ಮಳೆಯಾಗಿದೆ. ಇದೇ ರೀತಿ ಒಂದು ವೇಳೆ ಕೊಡಗಿನಲ್ಲಿ ಆಗೊಮ್ಮೆ ಈಗೊಮ್ಮೆ ಮಳೆ ಬಂತು ಎಂದಾದರೆ ಕೆಆರ್‌ಎಸ್‌ನಲ್ಲಿ ನೀರಿನ ಮಟ್ಟ ಹೆಚ್ಚಾಗುವ ಧೈರ್ಯವಿದೆ.

ಕಳೆದ ಒಂದು ತಿಂಗಳಲ್ಲೇ 100 ಹೊಸ ಬೋರ್ವೆಲ್‌ಗಳನ್ನೂ ಕೊರೆಯಲಾಗಿದೆ! ಈಗಾಗಲೇ ಕೊರೆದಿರುವ ಬೋರ್ವೆಲ್‌ಗಳಲ್ಲಿ ನೀರು ಆರಿಹೋಗಿದೆ. ಹೊಸ ಬೋರ್ವೆಲ್ ಕೊರೆದರೆ ಅಂತರ್ಜಲದ ಮಟ್ಟ ಕುಸಿದು ಹೋಗುತ್ತದೆ. ಕನಿಷ್ಠಪಕ್ಷ 2,000 ಅಡಿ ಕೊರೆದರೆ ಭೂಮಿಯ ಹೊರಪದರದ ಮೇಲೆ ದುಷ್ಪರಿಣಾಮ ಬೀರುತ್ತದೆ. ಟೆಕ್ಟೊನಿಕ್ ಫಲಕಗಳಿಗೆ ಶಾಕ್ ಕೊಟ್ಟಂತೆಯೂ ಆಗುತ್ತದೆ. ಇವೆಲ್ಲ ಭೂಕಂಪಕ್ಕೆ ಎಡೆ ಮಾಡಿಕೊಡುತ್ತವೆ. ಅಲ್ಲದೆ ಜಲಾಶಯಗಳಲ್ಲೂ ಬಿರುಕು ಮಾಡುತ್ತವೆ.

ಬೆಂಗಳೂರಿನಲ್ಲಿ ಶೇಖಡ 79 ರಷ್ಟು ಕೆರೆಗಳು ಮಾಯವಾಗಿವೆ. ಶೇಕಡಾ 75ರಷ್ಟು ಭೂಮಿ ಮತ್ತು ಶೇಕಡಾ 98ರಷ್ಟು ಕೆರೆಗಳು ಅತಿಕ್ರಮಣವಾಗಿವೆ. ಕೆರೆಗಳಿಗೆ ಹೆಸರುವಾಸಿಯಾಗಿದ್ದ ನಗರ ಇದೀಗ ಕಾಂಕ್ರೀಟ್ ಕಾಡಾಗಿದ್ದು ಕೆರೆಗಳ ಹೆಸರು ಕೇವಲ ರಸ್ತೆಗಳಿಗಷ್ಟೇ ಸೀಮಿತವಾಗಿದೆ.